# ನಿಮ್ಮೊಡನೆ

## ವೈದ್ಯ ಸೀಟಿನ ವಂಚನೆ

ಸರ್ಕಾರಿ ಸೀಟು ಪಡೆದು ನಂತರ ನಿರಾಕರಿಸಿದವರನ್ನು ಪತ್ತೆ ಹಚ್ಚಿ ವಿಚಾರಣೆ ನಡೆಸಬೇಕು. ಸರ್ಕಾರಿ ಕೋಟಾದಡಿ ಹಂಚಿಕೆಯಾದ ಸೀಟುಗಳು ಖಾಲಿ ಉಳಿದರೆ ಅವನ್ನು ಕಾಲೇಜುಗಳ ಆಡಳಿತ ಮಂಡಳಿಯ ಪಾಲಾಗುವುದಕ್ಕೆ ಅವಕಾಶ ನೀಡಬಾರದು. ಇಂತಹ ಸೀಟುಗಳನ್ನು ಆಯ್ಕೆ ಪಟ್ಟಿಯಲ್ಲಿರುವ ನಂತರದ ಅರ್ಹ ವಿದ್ಯಾರ್ಥಿಗಳಿಗೆ ನೀಡಬೇಕು.



ಸರ್ಕಾರಿ ಕೋಟಾದ ವೈದ್ಯಕೀಯ ಸೀಟುಗಳನ್ನು ಖಾಸಗಿ ಕಾಲೇಜು ಆಡಳಿತ ಮಂಡಳಿಗಳ ವಿವೇಚನಾ ಸೀಟುಗಳನ್ನಾಗಿ ಪರಿವರ್ತಿಸಿ ನಂತರ ಅವನ್ನು ಹೆಚ್ಚು ಹಣ ಕೊಡುವ ವಿದ್ಯಾರ್ಥಿಗಳಿಗೆ ಮಾರಿಕೊಳ್ಳುತ್ತಿದ್ದ ಜಾಲವೊಂದನ್ನು ಬೆಂಗಳೂರು ಪೊಲೀಸರು ಪತ್ತೆ ಹಚ್ಚಿದ್ದಾರೆ. ಈ ಜಾಲದ ಎಂಟು ಮಂದಿಯನ್ನು ಬಂಧಿಸಿದ್ದಾರೆ. ಅಕ್ರಮಗಳನ್ನು ತಡೆಯಲು ಸರ್ಕಾರ ರೂಪಿಸಿದ ನಿಯಮಗಳನ್ನೇ ಬಳಸಿಕೊಂಡು ಹೊಸ ಅಕ್ರಮಗಳನ್ನು ನಡೆಸಲು ಸಾಧ್ಯವಿದೆ ಎನ್ನುವುದನ್ನು ಈ ಪ್ರಕರಣ ಎತ್ತಿ ತೋರಿಸಿದೆ. ಖಾಸಗಿ ವೈದ್ಯಕೀಯ ಕಾಲೇಜು ಮಂಡಳಿಗಳೂ ಈ ವಂಚನೆಯಲ್ಲಿ ಭಾಗಿಯಾಗಿವೆ. ಅಷ್ಟೇ ಅಲ್ಲ, ರಾಜಕಾರಣಿಗಳು, ವೈದ್ಯಕೀಯ ಶಿಕ್ಷಣ ಇಲಾಖೆಯ ಅಧಿಕಾರಿಗಳು ಇದರಲ್ಲಿ ಭಾಗಿಯಾಗಿರುವ ಸಾಧ್ಯತೆಗಳನ್ನು ತಳ್ಳಿಹಾಕಲಾಗದು. ಒಟ್ಟಾರೆ ವೈದ್ಯಕೀಯ ಸೀಟು ಹಂಚಿಕೆ ವ್ಯವಸ್ಥೆ ದಾರಿ ತಪ್ಪಿದೆ. ಹಣಕ್ಕಾಗಿ ಏನನ್ನು ಬೇಕಾದರೂ ಮಾಡಲು ಸಿದ್ಧವಿರುವ ವಂಚಕರನ್ನು ನಿಯಂತ್ರಿಸುವುದು ಸರ್ಕಾರದ ಮುಂದಿರುವ ಸದ್ಯದ ಸವಾಲು.

ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶ ನೀಡುವ ವಿಷಯದಲ್ಲಿ ಬಹಳ ಹಿಂದಿನಿಂದಲೂ ಹಣ ಹಾಗೂ ರಾಜಕೀಯ ಪ್ರಭಾವಗಳು ಕೆಲಸ ಮಾಡುತ್ತ ಬಂದಿವೆ. ಅರ್ಹ ಹಾಗೂ ಪ್ರತಿಭಾವಂತರಿಗೆ ಅನ್ಯಾಯವಾಗುತ್ತಿದೆ ಎಂಬ ಆರೋಪಗಳಿದ್ದವು. ಇದನ್ನು ತಪ್ಪಿಸಲು ಸರ್ಕಾರ ಸಿಇಟಿ ಪರೀಕ್ಷೆ ನಡೆಸಿ ಸೀಟು ಹಂಚಿಕೆ ಮಾಡುವ ವ್ಯವಸ್ಥೆಯನ್ನು ಜಾರಿಗೆ ತಂದಿತು. ಸರ್ಕಾರಿ ಕೋಟಾದ ಸೀಟು ಹಂಚಿಕೆಯಲ್ಲಿ ಅಕ್ರಮಗಳಿಗೆ ಅವಕಾಶ ಕಡಿಮೆ ಎಂದೇ ಸಾರ್ವಜನಿಕರು ನಂಬಿದ್ದಾರೆ. ಆದರೆ ಈ ವ್ಯವಸ್ಥೆಯಲ್ಲೂ ಲೋಪಗಳಿವೆ ಎನ್ನುವುದು ಬಯಲಾಗಿದೆ. ಹಣದ ಅಗತ್ಯ ಇರುವ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಹುಡುಕಿ ಅವರಿಂದ ಸಿಇಟಿ ಪರೀಕ್ಷೆ ಬರೆಸಿ, ಸರ್ಕಾರಿ ಕೋಟಾದಡಿ ಅವರು ಪಡೆಯುವ ಸೀಟುಗಳು ಭರ್ತಿಯಾಗದಂತೆ ನೋಡಿಕೊಂಡು ಕೊನೆಗೆ ಅವನ್ನು ಕಾಲೇಜು ಆಡಳಿತ ಮಂಡಳಿಗಳು ಮಾರಾಟ ಮಾಡಲು ಅವಕಾಶ ಕಲ್ಪಿಸುವ ಕಳ್ಳ ಮಾರ್ಗ ಹುಡುಕಿದ ವಂಚಕರು ನಿಜಕ್ಕೂ ಚಾಣಾಕ್ಷರೇ. ಇಂತಹ ವಂಚಕರ ಹಿಂದೆ ಖಾಸಗಿ ವೈದ್ಯಕೀಯ ಕಾಲೇಜು ಆಡಳಿತ ಮಂಡಳಿಗಳ ಜನರಿದ್ದಾರೆ. ಸರ್ಕಾರಿ ಕೋಟಾದಲ್ಲಿ ಹಂಚಿಕೆಯಾದ ಸೀಟುಗಳು ಖಾಲಿ ಉಳಿಯಲು ಏನು ಕಾರಣ ಎನ್ನುವುದನ್ನು ಪರಿಶೀಲಿಸುವ ವ್ಯವಸ್ಥೆ ಇದ್ದಿದ್ದರೆ ಇಂಥ ವಂಚನೆಗೆ ಅವಕಾಶ ಇರುತ್ತಿರಲಿಲ್ಲ. ಒಟ್ಟಾರೆ ಸರ್ಕಾರದ ನಿಯಮಗಳಲ್ಲೇ ಲೋಪಗಳಿವೆ.

ಇದು ಯಾವುದೋ ಒಂದು ಕಾಲೇಜಿನಲ್ಲಿ ನಡೆದ ಅಕ್ರಮ ಎಂದು ಲಘುವಾಗಿ ಪರಿಗಣಿಸಲಾಗದು. ರಾಜ್ಯದ ಬಹುತೇಕ ಖಾಸಗಿ ಕಾಲೇಜುಗಳಲ್ಲಿ ಇಂತಹ ಅಕ್ರಮಗಳು ನಡೆದಿರುವ ಸಾಧ್ಯತೆಗಳಿವೆ. ಇದರಿಂದಾಗಿ ಅನೇಕ ಅರ್ಹರಿಗೆ ವೈದ್ಯರಾಗುವ ಅವಕಾಶ ತಪ್ಪಿಹೋಗಿದೆ. ಅನರ್ಹರು ವೈದ್ಯರಾಗಿದ್ದಾರೆ. ಕೆಲವೇ ವ್ಯಕ್ತಿಗಳು ಲಕ್ಷಾಂತರ ರೂಪಾಯಿ ಹಣ ಕಬಳಿಸಿದ್ದಾರೆ. ವೈದ್ಯಕೀಯ ಕಾಲೇಜು ಮಾತ್ರವೇ ಅಲ್ಲ, ದಂತ ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವೃತ್ತಿ ಶಿಕ್ಷಣ ಕ್ಷೇತ್ರದಲ್ಲಿ ಇಂತಹ ಇನ್ನಷ್ಟು ವಂಚನೆಗಳು ನಡೆದಿರುವ ಸಾಧ್ಯತೆಗಳಿವೆ. ಸರ್ಕಾರ ಕಠಿಣ ನಿಯಮಗಳನ್ನು ರೂಪಿಸಿದರೆ ಸಾಲದು. ನಿಯಮಗಳನ್ನು ಉಲ್ಲಂಘಿಸಲು ಸಾಧ್ಯವೇ ಎಂಬ ಬಗ್ಗೆಯೂ ಪರಿಶೀಲನೆ ನಡೆಯಬೇಕಿದೆ.

ರಾಜ್ಯದ ಉದ್ದಗಲದಲ್ಲಿರುವ ಖಾಸಗಿ ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದ ಅಡಿಯಲ್ಲಿ ಹಂಚಿಕೆಯಾದ ಸೀಟುಗಳು ಭರ್ತಿಯಾಗದೆ ಉಳಿದದ್ದೆಷ್ಟು? ಸೀಟುಗಳು ಖಾಲಿ ಉಳಿಯಲು ನಿಜವಾದ ಕಾರಣಗಳೇನು? ಒಬ್ಬನೇ ವಿದ್ಯಾರ್ಥಿ 2–3 ಸಲ ಪರೀಕ್ಷೆ ಬರೆದು ಸರ್ಕಾರಿ ಸೀಟು ನಿರಾಕರಿಸಿದ ಉದಾಹರಣೆಗಳಿವೆ ಎನ್ನಲಾಗಿದೆ. ಕೆಲ ಹಿರಿಯ ವೈದ್ಯಕೀಯ ವಿದ್ಯಾರ್ಥಿಗಳು ಹಾಗೂ ವೈದ್ಯರೂ ಸಿಇಟಿ ಪರೀಕ್ಷೆ ಬರೆದ ಆರೋಪಗಳು ಕೇಳಿ ಬಂದಿವೆ. ಸಿಇಟಿ ಪರೀಕ್ಷೆ ಬರೆಯಲು ಇರುವ ವಯೋಮಿತಿ ಮತ್ತಿತರ ಅರ್ಹತೆಗಳ ಬಗ್ಗೆ ಸರ್ಕಾರ ತನಿಖೆ ನಡೆಸುವ ಅಗತ್ಯವಿದೆ. ಸರ್ಕಾರಿ ಸೀಟು ಪಡೆದು ನಂತರ ನಿರಾಕರಿಸಿದವರನ್ನು ಪತ್ತೆ ಹಚ್ಚಿ ವಿಚಾರಣೆ ನಡೆಸಬೇಕು. ಸರ್ಕಾರಿ ಕೋಟಾದಡಿ ಹಂಚಿಕೆಯಾದ ಸೀಟುಗಳು ಖಾಲಿ ಉಳಿದರೆ ಅವನ್ನು ಕಾಲೇಜುಗಳ ಆಡಳಿತ ಮಂಡಳಿಯ ಪಾಲಾಗುವುದಕ್ಕೆ ಅವಕಾಶ ನೀಡಬಾರದು. ಇಂತಹ ಸೀಟುಗಳನ್ನು ಆಯ್ಕೆ ಪಟ್ಟಿಯಲ್ಲಿರುವ ನಂತರದ ಅರ್ಹ ವಿದ್ಯಾರ್ಥಿಗಳಿಗೆ ನೀಡಬೇಕು. ಸೀಟು ಹಂಚಿಕೆ ಮಾಡುವ ಈಗಿನ ವ್ಯವಸ್ಥೆ ಇನ್ನಷ್ಟು ಪಾರದರ್ಶಕವಾಗಬೇಕು. ಈಗಿನ ನಿಯಮಗಳನ್ನು ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆಗಳನ್ನು ಕುರಿತು ಸರ್ಕಾರ ಗಮನ ಕೊಡಬೇಕು. ಇಲ್ಲವಾದರೆ ಅಕ್ರಮಗಳು ನಡೆಯುತ್ತಲೇ ಇರುತ್ತವೆ.

■ ಪಿ.ಕೆ. ಹರಿಯಬ್ಬೆ